Akashvani : Bengaluru

National Bulletin In Kannada

03.09.2025 : 1.10pm

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

03.09.2025 : 1.10pm

*******

**<><*<><>*><>**

ಮುಖ್ಯಾಂಶಗಳು

೧. ಸೆಮಿಕಾನ್ ಇಂಡಿಯಾ ಶೃಂಗಸಭೆ; ಸೆಮಿಕಂಡಕ್ಟರ್ ವಲಯದ ತಜ್ಞರ ಜೊತೆ ಪ್ರಧಾನಿ ನರೇಂದ್ರ ಮೋದಿ ಸಂವಾದ

೨. ಜಿಎಸ್‌ಟಿ ಮಂಡಳಿಯ ೫೬ನೇ ಸಭೆ ದೆಹಲಿಯಲ್ಲಿಂದು ಆರಂಭ; ಮುಂದಿನ ಪೀಳಿಗೆಯ ಸುಧಾರಣೆಗಳ ಬಗ್ಗೆ ಮಹತ್ವದ ಚರ್ಚೆ

೩. ದೇಶವನ್ನು ಸಂಪೂರ್ಣ ನಕ್ಸಲ್ ಮುಕ್ತಗೊಳಿಸುವವರೆಗೆ ಸರ್ಕಾರ ವಿರಮಿಸುವುದಿಲ್ಲ - ಗೃಹ ಸಚಿವ ಅಮಿತ್ ಶಾ

೪. ಭಾರತ ಪ್ರವಾಸದಲ್ಲಿ ಸಿಂಗಾಪುರದ ಪ್ರಧಾನಿ ಲಾರೆನ್ಸ್ ವಾಂಗ್; ನಾಳೆ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ

೫. ಅಮೆರಿಕಾ ಓಪನ್ ಟೆನಿಸ್ ಟೂರ್ನಿ; ಪುರುಷರ ಡಬಲ್ಸ್ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ತಲುಪಿದ ಭಾರತದ ಯುಕಿ ಬಾಂಬ್ರಿ-ನ್ಯೂಜಿಲ್ಯಾಂಡ್‌ನ ಮೈಕಲ್ ವೀನಸ್ ಜೋಡಿ

><><><><*><><><><

ನವದೆಹಲಿಯ ಯಶೋಭೂಮಿಯಲ್ಲಿ ನಡೆಯುತ್ತಿರುವ ಸಿಲಿಕಾನ್ ಇಂಡಿಯಾ೨೦೨೫ ಶೃಂಗಸಭೆಯ ಎರಡನೇ ದಿನವಾದ ಇಂದು, ಪ್ರಧಾನಿ ನರೇಂದ್ರ ಮೋದಿ ಸೆಮಿಕಂಡಕ್ಟರ್ ಕ್ಷೇತ್ರದ ತಜ್ಞರೊಂದಿಗೆ ಸಂವಾದ ನಡೆಸಿದರು. ಬಳಿಕ ಅವರು, ವಸ್ತುಪ್ರದರ್ಶನಕ್ಕೆ ಭೇಟಿ ನೀಡಿ, ಸೆಮಿಕಂಡಕ್ಟರ್‌ಗೆ ಸಂಬಂಧಿಸಿದ ವಿವಿಧ ಉತ್ಪನ್ನಗಳು ಹಾಗೂ ಯೋಜನೆಗಳನ್ನು ವೀಕ್ಷಿಸಿದರು. ಈ ವೇಳೆ ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಉಪಸ್ಥಿತರಿದ್ದರು. ಪ್ರಧಾನಿ ನರೇಂದ್ರ ಮೋದಿ ಇಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ದುಂಡುಮೇಜಿನ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಭಾರತದ ಸೆಮಿಕಂಡಕ್ಟರ್ ಪೂರಕ ವ್ಯವಸ್ಥೆ ಮತ್ತು ಅದರ ಬೆಳವಣಿಗೆ ಮತ್ತು ಅಭಿವೃದ್ಧಿಯ ಕುರಿತು ಪ್ರಧಾನಿ ಸಿಇಒ ಗಳ ಜೊತೆ ಚರ್ಚಿಸಲಿದ್ದಾರೆ. ೩ ದಿನಗಳ ಸೆಮಿಕಾನ್ ಇಂಡಿಯಾ ೨೦೨೫ ಸಮ್ಮೇಳನಕ್ಕೆ ಪ್ರಧಾನಿ

ನಿನ್ನೆ ಚಾಲನೆ ನೀಡಿದ್ದರು. ಜಾಗತಿಕ ಸೆಮಿಕಂಡಕ್ಟರ್ ಪೂರೈಕೆ ಸರಣಿಯಲ್ಲಿ ಭಾರತವನ್ನು ವಿಶ್ವಾಸಾರ್ಹ ಪಾಲುದಾರನನ್ನಾಗಿ ಮಾಡುವ ಗುರಿಯನ್ನು ಈ ಸಮ್ಮೇಳನ ಹೊಂದಿದೆ.

><><><*><><><><

ಸರಕು ಮತ್ತು ಸೇವಾ ತೆರಿಗೆ-ಜಿಎಸ್‌ಟಿ ಮಂಡಳಿಯ ೫೬ನೇ ಸಭೆ ನವದೆಹಲಿಯಲ್ಲಿಂದು ಆರಂಭವಾಗಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಎರಡು ದಿನಗಳ ಸಭೆಯ ಅಧ್ಯಕ್ಷತೆ ವಹಿಸಿದ್ದಾರೆ. ತೆರಿಗೆ ದರಗಳನ್ನು ಏಕರೂಪಗೊಳಿಸುವುದು ಮತ್ತು ಪಾಲನೆಯ ಸರಳೀಕರಣ ಸೇರಿ ಭಾರತದ ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳ ಕುರಿತು ಮಂಡಳಿಯು ಮಹತ್ವದ ಚರ್ಚೆ ನಡೆಸುವ ನಿರೀಕ್ಷೆಯಿದೆ.

ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ, ದೆಹಲಿ, ಗೋವಾ, ಹರಿಯಾಣ, ಜಮ್ಮುಕಾಶ್ಮೀರ, ಮೇಘಾಲಯ, ಒಡಿಶಾದ ಮುಖ್ಯಮಂತ್ರಿಗಳು ಹಾಗೂ  ಹಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಹಣಕಾಸು ಸಚಿವರು ಸಭೆಯಲ್ಲಿ ಭಾಗವಹಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಈ ವರ್ಷದ ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ಸರಕು ಮತ್ತು ಸೇವಾ ತೆರಿಗೆ ರಾಷ್ಟ್ರಕ್ಕೆ ಹೇಗೆ ಪ್ರಯೋಜನವನ್ನು ನೀಡಿದೆ ಎಂಬುದನ್ನು ವಿವರಿಸಿದ್ದರು. ಅವರು ಜಿಎಸ್‌ಟಿ ಅಡಿಯಲ್ಲಿ ಮುಂದಿನ ಪೀಳಿಗೆಯ ಸುಧಾರಣೆಗಳ ಮಹತ್ವವನ್ನು  ಒತ್ತಿ ಹೇಳಿದ್ದರು, ಈ ಸುದಾರಣೆಗಳಿಂದ ಸಾಮಾನ್ಯ ಜನ, ರೈತರು, ಮಧ್ಯಮ ವರ್ಗ ಮತ್ತು ಎಂಎಸ್‌ಎಂಇ ಗಳಿಗೆ ಪರಿಹಾರ ದೊರಕುತ್ತದೆ ಎಂದು ತಿಳಿಸಿದ್ದರು.

ಧ್ವನಿ - ಪ್ರಧಾನಿ ನರೇಂದ್ರ ಮೋದಿ ( ೨೪ ಸೆಕೆಂಡುಗಳು )

ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳನ್ನು ದೀಪಾವಳಿಯಂದು ಅನಾವರಣಗೊಳಿಸಲಾಗುವುದು, ಅಗತ್ಯ ವಸ್ತುಗಳ ಮೇಲಿನ ತೆರಿಗೆಗಳನ್ನು ಕಡಿಮೆ ಮಾಡಲಿದೆ ಮತ್ತು ಸ್ಥಳೀಯ ಮಾರಾಟಗಾರರು ಮತ್ತು ಗ್ರಾಹಕರಿಗೆ ಪರಿಹಾರವನ್ನು ಒದಗಿಸಲಿದೆ.

><><><*><><><><

ಛತ್ತೀಸ್‌ಗಡದ ಕರ್ರೆಗುತ್ತಲು ಪ್ರದೇಶದಲ್ಲಿ ನಕ್ಸಲ್ ವಿರುದ್ಧ ಆಪರೇಷನ್ ಬ್ಲಾಕ್ ಕಾರ್ಯಾಚರಣೆ ನಡೆಸಿದ ಸಿಆರ್‌ಪಿಎಫ್, ಪೊಲೀಸ್, ಡಿಆರ್‌ಜಿ ಮತ್ತು ಕೋಬ್ರಾ ಸಿಬ್ಬಂದಿಯನ್ನು ಕೇಂದ್ರ ಗೃಹಸಚಿವ ಅಮಿತ್ ಶಾ ದೆಹಲಿಯಲ್ಲಿ ಇಂದು ಗೌರವಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ವಿಷ್ಣುದೇವ್ ಸಾಯ್ ಮತ್ತು ಉಪಮುಖ್ಯಮಂತ್ರಿ ವಿಜಯ್ ಶರ್ಮ ಉಪಸ್ಥಿತರಿದ್ದರು.  ನಂತರ ಮಾತನಾಡಿದ ಅಮಿತ್ ಶಾ, ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಸಿಬ್ಬಂದಿಯ ಧೈರ್ಯ ಮತ್ತು ಶೌರ್ಯ ನಕ್ಸಲ್ ವಿರುದ್ಧದ ಕಾರ್ಯಾಚರಣೆಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದ್ದು ಎಂದರು. ಅಲ್ಲದೆ, ದೇಶವನ್ನು ನಕ್ಸಲ್ ಮುಕ್ತಗೊಳಿಸುವವರೆಗೆ ಇಲ್ಲವೇ ಅವರು ಶರಣಾಗುವವರೆಗೆ ಹಾಗೂ ಅವರನ್ನು ಸೆರೆ ಹಿಡಿಯುವವರೆಗೆ ಸರ್ಕಾರ ವಿರಮಿಸುವುದಿಲ್ಲ ಎಂದು ಹೇಳಿದರು. ಅಲ್ಲದೇ,

ಪ್ರತಿಯೊಂದು ಹಂತದಲ್ಲೂ ಅಪಾಯಗಳಿದ್ದರೂ ಸಹ ನಮ್ಮ ಭದ್ರತಾ ಪಡೆಗಳು ಕಾರ್ಯಾಚರಣೆಗಳನ್ನು ಯಶಸ್ವಿಯಾಗಿ ನಡೆಸುತ್ತಿವೆ ಮತ್ತು ನಕ್ಸಲರ ಶಿಬಿರಗಳನ್ನು ಧ್ವಂಸ ಮಾಡುತ್ತಿವೆ. ನಕ್ಸಲರ ಪೂರೈಕೆ ಸರಣಿಯನ್ನು ಸಂಪೂರ್ಣವಾಗಿ ಕಡಿತಗೊಳಿಸಲಾಗಿದೆ ಎಂದು ಅಮಿತ್ ಶಾ ಹೇಳಿದರು.

><><><*><><><

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಹ್ವಾನದ ಮೇರೆಗೆ ಮೂರು ದಿನಗಳ ಭಾರತ ಪ್ರವಾಸ ಕೈಗೊಂಡಿರುವ ಸಿಂಗಾಪುರದ ಪ್ರಧಾನಿ ಲಾರೆನ್ಸ್ ವಾಂಗ್ ಇಂದು ಬೆಳಗ್ಗೆ ದೆಹಲಿಯ ರಾಜ್‌ಘಾಟ್ ಗೆ ಭೇಟಿ ನೀಡಿ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರಿಗೆ ಗೌರವ ನಮನ ಸಲ್ಲಿಸಿದರು. ಕಳೆದ ರಾತ್ರಿ ನವದೆಹಲಿಗೆ ಆಗಮಿಸಿದ ಅವರನ್ನು, ಹಣಕಾಸು ಖಾತೆ ರಾಜ್ಯಸಚಿವ ಪಂಕಜ್ ಚೌಧರಿ, ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. ಸಿಂಗಾಪುರದ ಪ್ರಧಾನಿ ಅವರು ಇಂದು ಭಾರತೀಯ ಉದ್ಯಮಿಗಳು ಹಾಗೂ ವಾಣಿಜ್ಯ ನಾಯಕರೊಂದಿಗೆ ಸಂವಾದ ನಡೆಸಲಿದ್ದಾರೆ. ಅಲ್ಲದೆ, ಅವರು ನಾಳೆ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಜೊತೆಗೆ ಸಿಂಗಾಪುರದ ಪ್ರಧಾನಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸಹ ಭೇಟಿ ಮಾಡುವ ಕಾರ್ಯಕ್ರಮ ನಿಗದಿಯಾಗಿದೆ.

><><><*><><><

ಎರಡು ದಿನಗಳ ಭಾರತ ಪ್ರವಾಸ ಕೈಗೊಂಡಿರುವ ಜರ್ಮನಿಯ ವಿದೇಶಾಂಗ ಸಚಿವ ಜಾನ್ ಡೇವಿಡ್ ವಾಡೆಪುಲ್, ದೆಹಲಿಯಲ್ಲಿಂದು ಕೇಂದ್ರ ಕೈಗಾರಿಕಾ ಮತ್ತು ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಅವರೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ವಿವರ ನೀಡಿರುವ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧ ೭೫ ವರ್ಷ ಪೂರ್ಣಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಜಪಾನ್ ಸಚಿವರ ಈ ಭೇಟಿ ಸಂಬಂಧಗಳ ಮತ್ತಷ್ಟು ಬಲವರ್ಧನೆಗೆ ಕಾರಣವಾಗಲಿದೆ ಎಂದು ತಿಳಿಸಿದ್ದಾರೆ. ಎರಡು ದಿನಗಳ ಭಾರತ ಪ್ರವಾಸಕ್ಕಾಗಿ ನಿನ್ನೆ ಬೆಳಗ್ಗೆ ಬೆಂಗಳೂರಿಗೆ ಆಗಮಿಸಿದ್ದ ಜರ್ಮನಿ ವಿದೇಶಾಂಗ ಸಚಿವರು ಇಸ್ರೋಗೆ ಭೇಟಿ ನೀಡಿದ ನಂತರ ರಾತ್ರಿ ದೆಹಲಿಗೆ ಆಗಮಿಸಿದರು.

><><><*><><><

ಭೂತಾನ್ ಪ್ರಧಾನಿ ದಾಶೋ ಶೆರಿಂಗ್ ಟೋಬ್ಗೆ ಹಾಗೂ ಭೂತಾನ್‌ನ ಮುಖ್ಯ ಮಠಾಧೀಶರಾದ ಜೆ.ಖೆನ್ಪೋ ಅವರು, ಇಂದಿನಿಂದ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ. ೪ ದಿನಗಳ ಭಾರತ ಪ್ರವಾಸದ ವೇಳೆ ಅವರು ಮುಖ್ಯವಾಗಿ ನಾಳೆ ಬಿಹಾರದ ರಾಜ್‌ಗಿರ್‌ನಲ್ಲಿರುವ ರಾಯಲ್ ಭೂತಾನ್ ದೇವಾಲಯದ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ದೇವಾಲಯ ಭಾರತ ಮತ್ತು ಭೂತಾನ್ ನಡುವಿನ ಬೌದ್ಧ ಧರ್ಮ ಹಂಚಿಕೆಯ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಸಂಕೇತವಾಗಿದೆ.

ಭೂತಾನ್ ಪ್ರಧಾನಿ ಅಯೋಧ್ಯೆಯ ರಾಮಮಂದಿರಕ್ಕೂ ಸಹ ಭೇಟಿ ನೀಡಲಿದ್ದಾರೆ. ಅಲ್ಲದೆ ಅವರು, ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸುವರು.

><><><*><><><

ಭೀಕರ ಭೂಕಂಪದಿಂದ ಸಂಕಷ್ಟದಲ್ಲಿರುವ ಅಫ್ಘಾನಿಸ್ತಾನಕ್ಕೆ ಭಾರತ ಮಾನವೀಯ ನೆರವನ್ನು ಒದಗಿಸಿದೆ. ಈ ಕುರಿತು ಮಾಹಿತಿ ನೀಡಿರುವ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್, ೨೧ ಟನ್ ಗಳಷ್ಟು ಪರಿಹಾರ ಸಾಮಗ್ರಿಗಳನ್ನು ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ. ಕಳುಹಿಸಲಾದ ಸಾಮಗ್ರಿಗಳಲ್ಲಿ ಕಂಬಳಿ, ತಾತ್ಕಾಲಿಕ ವಸತಿ, ಸ್ವಚ್ಛತಾ ಕಿಟ್‌ಗಳು, ನೀರು ಸಂಗ್ರಹಣಾ ಟ್ಯಾಂಕ್, ಜನರೇಟರ್, ಅಡುಗೆಪಾತ್ರೆ, ನೀರಿನ ಶುದ್ಧೀಕರಣ ಉಪಕರಣಗಳು, ಔಷಧಿಗಳು, ಗಾಲಿಕುರ್ಚಿಗಳು ಮತ್ತಿತರ ಅಗತ್ಯ ಸರಕುಗಳು ಸೇರಿವೆ.

><><><*><><><

ಛತ್ತೀಸ್‌ಗಡ, ಪೂರ್ವ ರಾಜಸ್ಥಾನ, ಗುಜರಾತ್, ಜಮ್ಮು-ಕಾಶ್ಮೀರ, ಲಡಾಖ್, ಕೊಂಕಣ, ಗೋವಾ, ಮಧ್ಯ ಮಹಾರಾಷ್ಟ್ರ, ಮಧ್ಯಪ್ರದೇಶ, ಒಡಿಶಾ ಮತ್ತು ವಿದರ್ಭ ಪ್ರಾಂತ್ಯದಲ್ಲಿ ಭಾರೀ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಅಲ್ಲದೆ, ಉತ್ತರಾಖಂಡ್, ಪಶ್ಚಿಮ ಉತ್ತರ ಪ್ರದೇಶ, ಪಂಜಾಬ್, ಹರಿಯಾಣ, ಛಂಡೀಗಡ, ದೆಹಲಿ ಮತ್ತು ಹಿಮಾಚಲ ಪ್ರದೇಶಗಳಲ್ಲೂ ಭಾರೀ ಮಳೆಯ ಅನುಭವವಾಗಲಿದೆ ಎಂದು ಐಎಂಡಿ ತಿಳಿಸಿದೆ.

><><><*><><><

ಅಮೆರಿಕಾ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತದ ಯುಕಿ ಬಾಂಬ್ರಿ ಮತ್ತು ನ್ಯೂಜಿಲ್ಯಾಂಡ್ ನ ಮೈಕಲ್ ವೀನಸ್ ಜೋಡಿ ತಮ್ಮ ಗೆಲುವಿನ ಅಭಿಯಾನವನ್ನು ಮುಂದುವರೆಸಿ ಕ್ವಾರ್ಟರ್ ಫೈನಲ್ ತಲುಪಿದೆ. ಈ ಜೋಡಿ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಜರ್ಮನಿಯ ಕೆವಿನ್ ಕ್ರಾವಿಯೇಟ್ಜ್ ಮತ್ತು ಟಿಮ್‌ಪುಟ್ಜ್ ಜೋಡಿಯನ್ನು ೬-೪, ೬-೪ ನೇರ ಸೆಟ್‌ಗಳಲ್ಲಿ ಮಣಿಸಿ ಮುಂದಿನ ಹಂತ ಪ್ರವೇಶಿಸಿತು. ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ಮತ್ತು ನ್ಯೂಜಿಲ್ಯಾಂಡ್ ಜೋಡಿ ಕ್ರೊವೇಷಿಯಾದ ನಿಕೋಲಾ, ಮೆಕ್ಟಿಕ್ ಮತ್ತು ಅಮೆರಿಕಾದ ರಾಜೀವ್ ರಾಮ್ ಜೋಡಿಯನ್ನು ಎದುರಿಸಲಿದೆ.

><><><*><><><

ವಿಶ್ವದ ಪ್ರತಿಷ್ಠಿತ ಚೆಸ್ ಟೂರ್ನಿಗಳಲ್ಲೊಂದಾದ ಫಿಡೆ ಗ್ರಾಂಡ್ ಸ್ವಿಸ್ ೨೦೨೫ ಕ್ಕೆ ಇಂದು ಉಜ್ಬೇಕಿಸ್ತಾನದ ಸಮರ್‌ಕಾಂಡ್‌ನಲ್ಲಿ ಚಾಲನೆ ದೊರೆಯಲಿದೆ. ಸೆಪ್ಟೆಂಬರ್ ೧೫ರವರೆಗೆ ನಡೆಯುವ ಈ ಟೂರ್ನಿ, ವಿಶ್ವಚೆಸ್ ಲೋಕದಲ್ಲಿ ಪ್ರಮುಖ ಸ್ಪರ್ಧೆಗಳಲ್ಲಿ ಒಂದಾಗಿದೆ. ಎಲ್ಲರ ಕಣ್ಣುಗಳು ಭಾರತ ತಂಡದ ಮೇಲೆ ನೆಟ್ಟಿದ್ದು, ಭಾರತದ ಅಗ್ರ ಶ್ರೇಣಿಯ ಆಟಗಾರ ಹಾಗೂ ಪ್ರಸ್ತುತ ವಿಶ್ವ

ಶ್ರೇಯಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಆರ್. ಪ್ರಜ್ಞಾನಂದ ಮುಕ್ತ ವಿಭಾಗದ ಅಗ್ರ ಶ್ರೇಯಾಂಕಿತ ಆಟಗಾರನಾಗಿ ಸ್ಪರ್ಧಿಸುತ್ತಿದ್ದಾರೆ.

><><><*><><><

ಬಿಹಾರದ ರಾಜ್‌ಗಿರ್‌ನಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿಂದು ನಡೆಯಲಿರುವ ಸೂಪರ್-೪ರ ಹಂತದ ತಮ್ಮ ಮೊದಲ ಪಂದ್ಯದಲ್ಲಿ ಭಾರತ ತಂಡದ ಆಟಗಾರರು ಪ್ರಬಲ ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದ್ದಾರೆ. ಪಂದ್ಯ ಸಂಜೆ ೭.೩೦ಕ್ಕೆ ಆರಂಭವಾಗಲಿದೆ. ಹರ್ಮನ್ ಪ್ರೀತ್ ನಾಯಕತ್ವದ ಭಾರತ ತಂಡ 'ಎ' ಗುಂಪಿನಿಂದ ಅಗ್ರಸ್ಥಾನದ ತಂಡವಾಗಿ ಈ ಹಂತಕ್ಕೆ ಪ್ರವೇಶ ಪಡೆದಿದೆ. ಗುಂಪಿನಲ್ಲಿ ತಾನಾಡಿದ ಮೂರೂ ಪಂದ್ಯಗಳಲ್ಲಿ ಕ್ರಮವಾಗಿ ಚೈನಾ, ಜಪಾನ್ ಹಾಗು ಕಜಕಿಸ್ತಾನ ತಂಡವನ್ನು ಪರಾಭವಗೊಳಿಸಿ ಅಜೇಯ ಮುನ್ನಡೆಯುತ್ತಿದೆ. ಹಾಗಾಗಿ, ದಕ್ಷಿಣ ಕೊರಿಯಾ ವಿರುದ್ಧವೂ ಉತ್ತಮ ಪ್ರದರ್ಶನ ನೀಡಿ ನಿರೀಕ್ಷಿತ ಗೆಲುವು ತನ್ನದಾಗಿಸಿಕೊಳ್ಳುವ ವಿಶ್ವಾಸ ಹೊಂದಿದೆ.

><><><*><><><